ಆರ್ ಬಿ ಐ.ಸಂ.2006-2007/299
ಡಿಬಿಓಡಿ.ಡಿಐಆರ್.ಬಿಸಿ.70/13.01.01/2006-07

ಮಾರ್ಚ್ 30, 2007

ಎಲ್ಲ ವಾಣಿಜ್ಯ ಬ್ಯಾಂಕುಗಳಿಗೆ
(ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಹೊರತುಪಡಿಸಿ)

ಮಾನ್ಯರೆ

ಚೆಕ್ಕುಗಳನ್ನು ಹತ್ತಿರದ ರೂಪಾಯಿಗೆ ಪೂರ್ಣಾಂಕಿತಗೊಳಿಸುವುದು

'ಠೇವಣಿಗಳ ಮೇಲೆ ಬಡ್ಡಿ ದರ' ಇದರ ಸಂಬಂಧ ನೀಡಲಾಗಿರುವ ಪ್ರಧಾನ ಸುತ್ತೋಲೆ ಡಿಬಿಓಡಿ.ಡಿಐಆರ್.ಬಿಸಿ.6/ 13.03.00/2006-07 ದಿನಾಂಕ 1 ಜುಲೈ 2006ರ 19ನೆ ಪ್ಯಾರವನ್ನು ಗಮನಿಸಿ. ಅದರಂತೆ ಸಾಲಗಳ ಮೇಲಿನ ಬಡ್ಡಿ ಹಾಗೂ ಠೇವಣಿಗಳ ಮೇಲೆ ಬಡ್ಡಿ ಪಾವತಿಯನ್ನೊಳಗೊಂಡಂತೆ ಎಲ್ಲ ವ್ಯವಹಾರಗಳನ್ನೂ ಹತ್ತಿರದ ರೂಪಾಯಿಗೆ ಪೂರ್ಣಾಂಕಿತಗೊಳಿಸಬೇಕೆಂದು ಬ್ಯಾಂಕುಗಳಿಗೆ ಆದೇಶಿಸಲಾಗಿದೆ. ಆಂದರೆ, 50 ಪೈಸೆ ಹಾಗೂ ಅದಕ್ಕೆ ಮೀರಿದವುಗಳನ್ನು ತಕ್ಷಣದ ಮುಂದಿನ ಹೆಚ್ಚಿನ ರೂಪಾಯಿಗೆ ಪೂರ್ಣಾಂಕಿತಗೊಳಿಸಬೇಕು ಹಾಗೂ 50 ಪೈಸೆಗೂ ಕೆಳಗಿನ ಮೌಲ್ಯಗಳ ವ್ಯವಹಾರಗಳನ್ನು ಕಡೆಗಣಿಸಬೇಕಾಗಿದೆ. ಆದಾಗ್ಯೂ, ಗ್ರಾಹಕರು ರೂಪಾಯಿಯ ಭಾಗಾಂಶದಲ್ಲಿ ನೀಡಿದ ಚೆಕ್ಕುಗಳನ್ನು ತಿರಸ್ಕರಿಸಬಾರದು ಅಥವಾ ಅಮಾನ್ಯಮಾಡಬಾರದೆಂದು ಬ್ಯಾಂಕುಗಳಿಗೆ ಆದೇಶಿಸಲಾಗಿದೆ.

2. ಇತ್ತೀಚೆಗೆ ಅಹಮದಾಬಾದಿನ ಗುಜರಾತ್ ಉಚ್ಚ ನ್ಯಾಯಾಲಯದ ಮುಂದೆ ಸರಕಾರಿ ಖಾತೆಗೆ ಜಮೆ ಮಾಡಲು ಸಲ್ಲಿಸಿದ ರೂಪಾಯಿಯ ಭಾಗವನ್ನು ಒಳಗೊಂಡ ಡ್ರಾಫ್ಟನ್ನು ಸ್ವೀಕರಿಸಲು ಬ್ಯಾಂಕು ನಿರಾಕರಿಸಿದ ಪ್ರಕರಣವೊಂದು ದಾಖಲಾಗಿದೆ. ಗುಜರಾತ್ ಉಚ್ಚ ನ್ಯಾಯಾಲಯವು ಇದನ್ನು ತೀವ್ರವಾಗಿ ಪರಿಗಣಿಸಿ ಭಾ.ರಿ. ಬ್ಯಾಂಕ್ (ಆರ್.ಬಿ.ಐ.) ಗೆ ಕೆಳಕಂಡ ನಿರ್ದೇಶನಗಳನ್ನು ನೀಡಿದೆ. ಪ್ಯಾರಾ 1ರಲ್ಲಿ ಇರುವ ಸೂಚನೆಗಳನ್ನು ಗಮನದಲ್ಲಿರಿಸಿಕೊಂಡು ಸೂಕ್ತ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಅವಶ್ಯವಿದ್ದಲ್ಲಿ ಮೇಲೆ ತಿಳಿಸಿರುವ ಚೆಕ್ಕು ಮುಂತಾದವುಗಳನ್ನು ಸ್ವೀಕರಿಸದಂತೆ ಸೂಚನೆಯಿರುವ ಆಂತರಿಕ ಸುತ್ತೋಲೆಗಳನ್ನು ನೀಡಿದಂತಹ ಎಲ್ಲ ಬ್ಯಾಂಕುಗಳಿಗೆ ಹೊಸ ಅಧಿಸೂಚನೆ/ಸೂಚನೆಗಳನ್ನು ನೀಡಬೇಕು ಮತ್ತು ಅಂತಹ ರೂಪಾಯಿಯ ಭಾಗಾಂಶದಲ್ಲಿ ನೀಡಲಾಗಿರುವ ಚೆಕ್ಕುಗಳು / ಡ್ರಾಫ್ಟ್ ಗಳನ್ನು ಸ್ವೀಕರಿಸಲು ನಿರಾಕರಿಸುವ ವ್ಯಕ್ತಿಯ ವಿರುದ್ಧ ಅತ್ಯಂತ ಕಠಿಣ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು. ಆದ್ದರಿಂದ ಗ್ರಾಹಕರು ರೂಪಾಯಿಯ ಭಾಗಾಂಶದಲ್ಲಿ ನೀಡಿದ ಚೆಕ್ಕುಗಳು / ಡ್ರಾಫ್ಟ್ ಗಳನ್ನು ತಿರಸ್ಕರಿಸದಿರುವಂತೆ ಅಥವಾ ಅಮಾನ್ಯ ಮಾಡದಂತೆ ಬ್ಯಾಂಕುಗಳಿಗೆ ಈ ಮೂಲಕ ಸೂಚಿಸಲಾಗಿದೆ ಇದಕ್ಕೆ ಸಂಬಂಧಿಸಿದಂತೆ, ಈಗ ಪಾಲಿಸಲಾಗುತ್ತಿರುವ ಕ್ರಮಗಳನ್ನು ಬ್ಯಾಂಕುಗಳು ಪರಿಷ್ಕರಿಸಬೇಕು ಮತ್ತು ಸಾರ್ವಜನಿಕರು ತೊಂದರೆಗೊಳಗಾಗುವುದನ್ನು ತಪ್ಪಿಸಲು ಸಂಬಂಧಿಸಿದ ಸಿಬ್ಬಂದಿ ಈ ಸೂಚನೆಗಳ ಸಂಪೂರ್ಣ ತಿಳುವಳಿಕೆ ಹೊಂದಲನುವಾಗುವಂತೆ ಬ್ಯಾಂಕುಗಳು ಆಂತರಿಕ ಸುತ್ತೋಲೆಗಳೇ ಮುಂತಾದವುಗಳನ್ನು ನೀಡಲು ಕ್ರಮ ತೆಗೆದುಕೊಳ್ಳಬೇಕು. ರೂಪಾಯಿಯ ಭಾಗಾಂಶದಲ್ಲಿ ನೀಡಿದ ಚೆಕ್ಕು / ಡ್ರಾಫ್ಟ್ ಗಳನ್ನು ಸ್ವೀಕರಿಸಲು ಸಿಬ್ಬಂದಿ ನಿರಾಕರಿಸಿದ ಸಂದರ್ಭ ಕಂಡುಬಂದಲ್ಲಿ ಅಂತಹ ಸಿಬ್ಬಂದಿಯ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವುದನ್ನು ಬ್ಯಾಂಕುಗಳು ಖಚಿತ ಪಡಿಸಿಕೊಳ್ಳಬೇಕು.

3. ಮೇಲೆ ನೀಡಲಾಗಿರುವ ಸೂಚನೆಗಳನ್ನು ಉಲ್ಲಂಘಿಸುವ ಯಾವುದೇ ಬ್ಯಾಂಕು, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರನ್ವಯ (ಎ.ಎ.ಸಿ.ಎಸ್.) ದಂಡಾರ್ಹವಾಗುತ್ತದೆ.

ತಮ್ಮ ವಿಶ್ವಾಸಿ

(ಪಿ. ವಿಜಯ ಭಾಸ್ಕರ್)
ಮುಖ್ಯ ಮಹಾ ವ್ಯವಸ್ಥಾಪಕರು